ತುಂಗಾ ಮೇಲ್ದಂಡೆ ಯೋಜನೆ

633 (829) ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಬಗರ್ ಹುಕುಂ ರೈತರಿಗೆ ಪರಿಹಾರ ಹಾಗೂ ಪುನರ್ ವಸತಿ ನೀಡಲಾಗುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲ ಸಂಪನ್ಮೂಲ ಸಚಿವರು) :

ಅ) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದ ಬಗರ್ ಹುಕುಂ ರೈತರಿಗೆ ನಿಯಮಾವಳಿಗಳ ಪ್ರಕಾರ ಹಾಗೂ ಸರ್ಕಾರದಿಂದ ಅನುಮೋದನೆಗೊಂಡ ಪುನರ್ ವಸತಿ ಪ್ಯಾಕೇಜ್ ಅನ್ವಯ ಅನುಗ್ರಹ ಅನುದಾನವನ್ನು ಮಾತ್ರ ಪರಿಹಾರದ ರೂಪದಲ್ಲಿ ನೀಡಲು ಕ್ರಮಕೈಗೊಳ್ಳಲಾಗಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ ವಶಪಡಿಸಿಕೊಂಡಿರುವ ಜಮೀನು

636 (1051) ಶ್ರೀ ಕೃಷ್ಣ ಭೈರೇಗೌಡ ಸಿ.ಬಿ. (ಬ್ಯಾಟರಾಯನಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬ್ಯಾಟರಾಯನಪುರ ಕ್ಷೇತ್ರದ ಜಾಲ ಹೋಬಳಿಯಲ್ಲಿ ಏಪ್ರಿಲ್ 2008 ರ ನಂತರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ ಅಥವಾ ವಶಪಡಿಸಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ;

ಆ) ಸದರಿ ಜಮೀನುಗಳಿಗೆ ನಿಗದಿಪಡಿಸಲಾದ ಪರಿಹಾರಧನ ಎಷ್ಟು (ಗ್ರಾಮವಾರು/ ಹಳ್ಳಿವಾರು ವಿವರಗಳನ್ನು ಒದಗಿಸುವುದು);

ಇ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳ ಜಮೀನನ್ನು ಯಾವ ಯಾವ ಕಾರಣಕ್ಕಾಗಿ ವಶಪಡಿಸಿಕೊಳ್ಳಲಾಗಿದೆ;

ಈ) ಜಾಲ ಹೋಬಳಿಯ ಕೆಲವು ಗ್ರಾಮಗಳ ಜಮೀನುಗಳಿಗೆ ಎಕರೆಗೆ 60 ಲಕ್ಷಕ್ಕೂ ಮೇಲ್ಪಟ್ಟು ಪರಿಹಾರ ನೀಡುತ್ತಿದ್ದು ಬಂಡಿಕೊಡಿಗೆ

ಹಳ್ಳಿಯ ಕೆಲವು ಜಮೀನುಗಳಿಗೆ ಪ್ರತಿ ಎಕರೆಗೆ ರೂ.30 ಲಕ್ಷಗಳ ಪರಿಹಾರ ನಿಗದಿ ಮಾಡಿರುವುದು ಅನ್ಯಾಯವಲ್ಲವೇ;

ಊ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಯಾವ ಉದ್ದೇಶಗಳಿಗಾಗಿ ಹಾಗೂ ಯಾವ ಯಾವ ಕಂಪನಿಗಳಿಗೆ ಜಮೀನನ್ನು ನೀಡಲಾಗುತ್ತಿದೆ. ಆ ಕಂಪನಿಗಳ ಉದ್ದೇಶಗಳೇನು ಹಾಗೂ ಈ ಕಂಪನಿಗಳ ಆಡಳಿತ ಮಂಡಳಿಯವರ ಸಂಪೂರ್ಣ ವಿವರ ನೀಡುವುದು;

ಋ) ಜಾಲ ಹೋಬಳಿಯಲ್ಲಿ ವಶಪಡಿಸಿಕೊಂಡಿರುವ ಉದ್ದೇಶಿಸಿರುವ ಜಮೀನುಗಳಿಗೆ ಪ್ರತಿ ಎಕರೆಗೆ ಸರ್ಕಾರ ನಿಗದಿಪಡಿಸಿರುವ ಮೊತ್ತ ಎಷ್ಟು (ಗ್ರಾಮವಾರು ವಿವರ ನೀಡುವುದು)?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬ್ಯಾಟರಾಯನಪುರ ಕ್ಷೇತ್ರದ ಜಾಲ ಹೋಬಳಿಯಲ್ಲಿ ಏಪ್ರಿಲ್ 2008 ರ ನಂತರ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಹಾರ್ಡ್‌ವೇರ್ ಪಾರ್ಕ್ ಹಾಗೂ ಐ.ಟಿ.ಪಾರ್ಕ್ ಸ್ಥಾಪನೆಗಾಗಿ ಈ ಕೆಳಕಂಡಂತೆ ಜಮೀನನ್ನು ಸ್ವಾಧೀನಪಡಿಸಲು ಕಲಂ 28(4) ರ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಹಾರ್ಡ್ ವೇರ್ ಪಾರ್ಕ್

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 649 ಎಸ್‌ಪಿಕ್ಯೂ 2007 ದಿನಾಂಕ: 09.04.2008

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಾಗಲೂರು	231–03
2	ಹೂವಿನಾಯಕನಹಳ್ಳಿ	336–14
3	ಮಹದೇವಕೊಡಿಗೆಹಳ್ಳಿ	301–32
	ಒಟ್ಟು	**869–09**

2. ಸರ್ಕಾರದ ಅಧಿಸೂಚನೆ ಸಂಖ್ಯೆ ಸಿಐ 422 ಎಸ್‌ಪಿಕ್ಯೂ 2005 ದಿನಾಂಕ: 03.11.2006

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಂಡಿಕೊಡಿಗೆಹಳ್ಳಿ	450–24

ಐ ಟಿ ಪಾರ್ಕ್

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 397 ಎಸ್‌ಪಿಕ್ಯೂ 2007 ದಿನಾಂಕ: 25.09.2008

ಕ್ರ ಸಂ.	ಗ್ರಾಮ	ವಿಸ್ತೀರ್ಣ ಎ ಗು
1	ಬಿ.ಕೆ.ಪಾಳ್ಯ	232–31
2	ಸಿಂಗಹಳ್ಳಿ	331–18
3	ಅರೆಭಿನ್ನಮಂಗಲ	398–33
4	ಗೊಲ್ಲಹಳ್ಳಿ	65–17
	ಒಟ್ಟು	**1028–191/2**

ಆ) ಹಾರ್ಡ್‌ವೇರ್ ಪಾರ್ಕ್

ಕ್ರ ಸಂ.	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಬಂಡಿಕೊಡಿಗೆಹಳ್ಳಿ	31.00 40.00	21.11.2007
2	ಬಾಗಲೂರು ಹೂವಿನಾಯಕನಹಳ್ಳಿ ಮಹದೇವಕೊಡಿಹಳ್ಳಿ	70.00 60.00 60.00	18.12.2008

ಐ ಟಿ ಪಾರ್ಕ್

ಕ್ರ ಸಂ:	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಸಿಂಗಹಳ್ಳಿ	62.00	24.12.2008
	ಗೊಲ್ಲಹಳ್ಳಿ	62.00	
	ಅರೆಭಿನ್ನಮಂಗಲ	62.00	
	ಬಿ.ಕೆ.ಪಾಳ್ಯ	62.00	

ಇ) ಬಂಡಿಕೊಡಿಗೆಹಳ್ಳಿಯ ವ್ಯಾಪ್ತಿಯಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳ ಜಮೀನನ್ನು ಹಾರ್ಡ್‌ವೇರ್ ಪಾರ್ಕ್, ಐಟಿ ಪಾರ್ಕ್ ಹಾಗೂ ಏರೋಸ್ಪೇಸ್ ಕಾಂಪೋನೆಂಟ್ಸ್ ಸ್ಥಾಪನೆಗಾಗಿ ಸ್ವಾಧೀನಪಡಿಸಲಾಗಿದೆ.

ಈ) ಬಂಡಿಕೊಡಿಗೆಹಳ್ಳಿ ಗ್ರಾಮದಲ್ಲಿ 450 ಎಕರೆ 05 ಗುಂಟೆ ಜಮೀನನ್ನು ಸ್ವಾಧೀನಪಡಿಸಲು ದಿನಾಂಕ: 07.05.2007 ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು ಸದರಿ ಜಮೀನುಗಳಿಗೆ ದಿನಾಂಕ: 21.11.2007 ರಂದು ಭೂದರ ಸಲಹಾ ಸಮಿತಿ ಸಭೆಯು ನಡೆದು ಬಾಗಲೂರು ಮುಖ್ಯರಸ್ತೆಗೆ ಹೊಂದಿಕೊಂಡಿರುವ ಜಮೀನಿಗೆ ರೂ.40.00 ಲಕ್ಷದಂತೆಯೂ, ಉಳಿದ ಜಮೀನಿಗೆ ಎಕರೆಯೊಂದಕ್ಕೆ ರೂ.31.00 ಲಕ್ಷದಂತೆಯೂ ಹಾಗೂ ಭೂಪರಿವರ್ತನೆ ಜಮೀನಿಗೆ ಹೆಚ್ಚುವರಿಯಾಗಿ ರೂ.2.00 ಲಕ್ಷದಂತೆ ಪರಿಹಾರ ನೀಡಲು ನಿಗದಿಯಾಗಿರುತ್ತದೆ. ಈ ದರಕ್ಕೆ ಬಹುತೇಕ ಭೂಮಾಲೀಕರು ಒಪ್ಪಿಗೆ ಸೂಚಿಸಿದ್ದು ಅದರಂತೆ ಭೂ ಪರಿಹಾರವನ್ನು ಪಾವತಿಸಲಾಗಿದೆ.

ಉ) ಬಂಡಿಕೊಡಿಗೆಹಳ್ಳಿ ಗ್ರಾಮದಲ್ಲಿ ಹಾರ್ಡ್‌ವೇರ್ ಪಾರ್ಕ್ ಸಲುವಾಗಿ ಮಂಡಳಿಯಿಂದ ಒಟ್ಟು 450–05 ಎಕರೆ ಜಮೀನನ್ನು ಕಲಂ 28(4) ರಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಈ ಜಮೀನಿನ ಪೈಕಿ ಸರ್ಕಾರದ ಆದೇಶ ಸಂಖ್ಯೆ: ಐಟಿಡಿ/ 42/ ಎಂಡಿಎ/ 2006(1) ದಿನಾಂಕ: 16.01.2007 ರಂತೆ ದಿನಾಂಕ: 28.08.2006 ರಂದು ನಡೆದ 7ನೇ ರಾಜ್ಯ ಉನ್ನತಮಟ್ಟದ ಸಮಿತಿ ಸಭೆಯಲ್ಲಿ ಮೆ: ಇಟಾಸ್ಕ ಸಾಫ್ಟ್‌ವೇರ್ ಡೆವಲಪ್‌ಮೆಂಟ್ ಪ್ರೈ ಲಿ. ರವರಿಗೆ 325–00 ಎಕರೆ ಜಮೀನನ್ನು

ಭೂಸ್ವಾಧೀನಪಡಿಸಿ ಹಂಚಿಕೆ ಮಾಡಲು ನಿರ್ಣಯವಾಗಿರುತ್ತದೆ. ಉಳಿದ ಜಮೀನನ್ನು ಕೈಗಾರಿಕಾ ಪ್ರದೇಶಕ್ಕಾಗಿ ಉಪಯೋಗಿಸಲಾಗುವುದು.

ಊ) ಜಾಲ ಹೋಬಳಿಯಲ್ಲಿ ವಶಪಡಿಸಿಕೊಂಡಿರುವ ಜಮೀನುಗಳಿಗೆ ಈ ಕೆಳಕಂಡಂತೆ ಪರಿಹಾರ ಧನ ನಿಗದಿಪಡಿಸಲಾಗಿದೆ.

ಕ್ರ. ಸಂ.	ಗ್ರಾಮ	ನಿಗದಿಪಡಿಸಿದ ದರ ಲಕ್ಷ ರೂ.ಗಳಲ್ಲಿ (ಪ್ರತಿ ಎಕರೆಗೆ)	ದರ ನಿಗದಿ ಪಡಿಸಿದ ದಿನಾಂಕ
1	ಬಂಡಿಕೊಡಿಗೆಹಳ್ಳಿ	31.00 40.00	21.11.2007
2	ಬಾಗಲೂರು ಹೂವಿನಾಯಕನಹಳ್ಳಿ ಮಹದೇವಕೊಡಿಗೆಹಳ್ಳಿ	70.00 60.00 60.00	18.12.2008
3	ಸಿಂಗಹಳ್ಳಿ ಗೊಲ್ಲಹಳ್ಳಿ ಅರಭಿನ್ನಮಂಗಲ ಬಿ.ಕೆ.ಪಾಳ್ಯ	62.00 62.00 62.00 62.00	24.12.2008
4	ಜೊನ್ನಹಳ್ಳಿ ಕವಡದಾಸನಹಳ್ಳಿ ಬಾಲದಿಮ್ಮನಹಳ್ಳಿ ಬಟ್ರಮಾರನಹಳ್ಳಿ	55.00 55.00 55.00 55.00	25.03.2008
5	ಸಿಂಗಹಳ್ಳಿ	57.00	